

# ಎಂದಿಗೂ ಮುಗಿಯದ ಕೊನೇ ಅಧ್ಯಾಯ

**ಸ್ತ್ರೀವಾದಿಯ ವೇಷ ತೊಟ್ಟ ಕ್ರೂರಿಯೊಬ್ಬ ತನ್ನದೇ ಭೂತಕಾಲದ ಕೃತ್ಯದ ಫಲ ಕಣ್ಣೆದುರು ಬಂದಾಗ ಅನುಭವಿಸುವ ಆಘಾತವನ್ನು ಈ ಕಿರುಚಿತ್ರ, ಸಿನಿಮೀಯವಾಗಿ ತೋರಿಸುತ್ತದೆ.**

**■ ಗೌರಿ**

'ಪುರುಷ ನಿನ್ನನ್ನು ಯಾವಾಗ, ಹೇಗೆ ಬೇಕಾದರೂ ಶೋಷಿಸಬಹುದು. ಈಗಲೂ ನೀನು ಪುರುಷನ ಕರುಣೆಯಲ್ಲಿಯೇ ಇದ್ದೀಯಾ?'

ತನ್ನ ಎದುರಿನ ಎಳೆಯ ವಯಸ್ಸಿನ ಸುಂದರ ಹುಡುಗಿಯೊಟ್ಟಿಗೆ ಆ ನಡುವಯಸ್ಸಿನ ವ್ಯಕ್ತಿ ಮಾತನಾಡುತ್ತಲೇ ಹೋಗುತ್ತಾನೆ. ಅವನ ಧ್ವನಿಯಲ್ಲಿ ತಾನು ನಿನಗಿಂತ ಶ್ರೇಷ್ಠ, ಬುದ್ಧಿವಂತ, ಗಣ್ಯ ಎಂಬೆಲ್ಲ ಅಹಂಕಾರಗಳೂ ಇವೆ.

ಇಷ್ಟು ಹೊತ್ತಿನ ತನಕ ಒಂದೂ ಮಾತಾಡದೆ, ಸಿಗರೇಟು ಸೇದುತ್ತ ಅವನ ಮಾತುಗಳನ್ನು ಒಂದು ಬಗೆಯ ದಿವ್ಯ ನಿರ್ಲಕ್ಷ್ಯದಲ್ಲಿ ಕೇಳಿಸಿಕೊಳ್ಳುತ್ತಿದ್ದ ಹುಡುಗಿ ಈಗ ಬಾಯಿ ಬಿಡುತ್ತಾಳೆ. ಅವಳ ಮಾತುಗಳಲ್ಲಿ ಅವನ ಅಹಂಕಾರವನ್ನು ಹೊಕ್ಕುಹೊಡೆವ ಛಾತಿ, ವಿಶ್ವಾಸವಿದೆ. 'ನಾನೇನೂ ಪುರುಷರ ಕರುಣೆಯಲ್ಲಿಲ್ಲ. ಪುರುಷರೇ ನನ್ನ ಕರುಣೆಯಲ್ಲಿದ್ದಾರೆ'. ಈ ಮಾತಿಗೆ ಕೊಂಚ ವಿಚಲಿತನಾಗುವ ಅವನು, 'ನಿಜವಾಗಲೂ?' ಎಂದು ಪ್ರಶ್ನಿಸುತ್ತಾನೆ.

ಹುಡುಗಿಯಲ್ಲಿ ಯಾವುದೇ ಗೊಂದಲ ಇಲ್ಲ. 'ಮೋಸ್ಟ್ ಪವರ್‌ಫುಲ್ ಪುರುಷರೆಲ್ಲ ನನ್ನೆದುರು ಮಂಡಿಯೂರಿ ನಿಂತುಕೊಳ್ಳುತ್ತಾರೆ. ಬರಿಯ ದೈಹಿಕವಾಗಿ ಮಾತ್ರವಲ್ಲ. ಪುರುಷ ಅತ್ಯಂತ ದುರ್ಬಲನಾಗುವುದು ಎಲ್ಲಿ ಗೊತ್ತೆ? ಹಾಸಿಗೆಯಲ್ಲಿ ಬೆತ್ತಲಾದಾಗ' – ಹೀಗೆ ದಿಟ್ಟವಾಗಿ ಮಾತಾಡುವ ಅವಳ ನಸುನಗು ಎದುರಿನ ಮನುಷ್ಯನಷ್ಟೇ ಅಲ್ಲ, ಇಡೀ ಪುರುಷಲೋಕದ ಅಹಂಕಾರದ ಬುಡ ಕತ್ತರಿಸುವಷ್ಟು ಹರಿತವಾಗಿದೆ.



**ಹೆಸರು:** ದಿ ಲಾಸ್ಟ್ ಚಾಪ್ಟರ್ (ಹಿಂದಿ)
**ನಿರ್ದೇಶನ:** ರಾಜ್ ಸಿಂಗ್ ಚೌದರಿ
**ನಿರ್ಮಾಣ:** ರಾಜೇಶ್ ಡಿಯೋರಾ
**ಛಾಯಾಗ್ರಹಣ:** ರಾಜಾ ಸೈಯದ್
**ಸಂಕಲನ:** ಆಸೀಮ್ ಸಿನ್ಹಾ
**ಧ್ವನಿ ಮತ್ತು ಸಂಗೀತ:** ಮನೋಜ್ ಸಿಕ್ಕಾ, ವಿಪಿನ್ ಮಿಶ್ರಾ
**ತಾರಾಗಣ:** ಕೆ.ಕೆ. ಮೆನನ್, ಮಿಷ್ಟಿ ಚಕ್ರವರ್ತಿ

ಅವಳನ್ನು ಮಾತನಾಡಿಸುತ್ತ ಕೂತಿರುವ ವ್ಯಕ್ತಿ ಜನಪ್ರಿಯ ಸಮಾಜ ಸೇವಕ. ಮಹಿಳಾ ಸಬಲೀಕರಣದಲ್ಲಿ ಅವನ ಸೇವೆಯನ್ನು ಪರಿಗಣಿಸಿ ಸರ್ಕಾರ 'ಪದ್ಮಶ್ರೀ' ಪ್ರಶಸ್ತಿಯನ್ನು ಘೋಷಿಸಿದೆ. ಅವನ ಬರಲಿರುವ ಪುಸ್ತಕದ ಹೆಸರು 'ವಸಂತಸೇನಾ'. ಲೈಂಗಿಕ ಕಾರ್ಯಕರ್ತೆಯರನ್ನು ಮಾತಾಡಿಸಿ, ಅವರೊಂದಿಗೆ ನಡೆಸಿದ ಸಂವಾದವನ್ನು ಪುಸ್ತಕರೂಪದಲ್ಲಿ ತರುತ್ತಿದ್ದಾನೆ. ಆ ಪುಸ್ತಕದ ಒಂದೊಂದು ಅಧ್ಯಾಯಗಳನ್ನೂ ವಿಡಿಯೊ ಬ್ಲಾಗ್‌ನಲ್ಲಿ ಹೇಳುತ್ತ, ಅಲ್ಲಿಯೂ ಜನಪ್ರಿಯನಾಗಿದ್ದಾನೆ. ರೋಷನಿ ಕೂಡ ಹೀಗೆಯೇ ಅವನ ಪುಸ್ತಕದ ಭಾಗವಾಗಲು ಸಂದರ್ಶನಕ್ಕಾಗಿಯೇ ಅವನ ಮನೆಗೆ ಬಂದು ಹೋದವಳು. ಅವಳ ಕುರಿತು ಅವನು ವಿಡಿಯೊ ಬ್ಲಾಗ್‌ನಲ್ಲಿ ಹೇಳುತ್ತಿದ್ದಾನೆ. ಅದು ಅವನ ಪುಸ್ತಕದ ಕೊನೆಯ ಅಧ್ಯಾಯ.

ಹೀಗೆ ನೈತಿಕತೆಯ ಮುಖವಾಡ ಹೊತ್ತಿರುವ ಆಷಾಡಭೂತಿಯಂತೆ ಕಾಣುವ ವ್ಯಕ್ತಿ ಮತ್ತು ತಾನು ನಡೆಸುತ್ತಿರುವ ವೇಶ್ಯಾವೃತ್ತಿಯ ಕುರಿತು ದಿಟ್ಟವಾಗಿ ಮಾತನಾಡುವ ಎಳೆಯ ಹುಡುಗಿಯ ನಡುವಿನ ಖಾಲಿ ಜಾಗದಿಂದಲೇ 'ದಿ ಲಾಸ್ಟ್ ಚಾಪ್ಟರ್' ಕಿರುಚಿತ್ರ ತೆರೆದುಕೊಳ್ಳುತ್ತಾ ಹೋಗುತ್ತದೆ.

ಸೇವೆ, ಮಾನವೀಯತೆ, ಕರುಣೆಗಳು ಮನುಷ್ಯಕುಲವನ್ನು ಬೆಳಗುವ ದೀಪಗಳು. ಆದರೆ ಈ ದೀಪಗಳನ್ನೇ ಇಟ್ಟುಕೊಂಡು ಬೆಂಕಿ ಹಚ್ಚುವವರೂ ನಮ್ಮಲ್ಲಿ ಸಾಕಷ್ಟಿದ್ದಾರೆ. ಸಮಾಜಸೇವೆಯ ಮುಖ ತೊಟ್ಟು ಮೆರೆದಾಡುವ ಕ್ರೂರಿಯೊಬ್ಬನನ್ನು ಅವನದ್ದೇ ಪಾಪದ ಉರಿ ದಹಿಸುವ ಕಥೆಯನ್ನು ಈ ಕಿರುಚಿತ್ರ ಹೇಳುತ್ತದೆ.

ತನ್ನ ಮನೆಗೆ ಸಂದರ್ಶನಕ್ಕಾಗಿ ಬಂದ ಎಲ್ಲ ಹುಡುಗಿಯರ ಜೊತೆಗೂ ಆ ವ್ಯಕ್ತಿ ಮಲಗುತ್ತಾನೆ. ಆದರೆ ಒಂದು ದಿನ, ತಾನು ನಿನ್ನೆ ಮಲಗಿದ್ದು ತನ್ನ ಮಗಳ ಜೊತೆಗೇ ಎಂದು ಗೊತ್ತಾದರೆ ಅವನ ಪರಿಸ್ಥಿತಿ ಹೇಗಿರುತ್ತದೆ?

'ನನ್ನ ಮತ್ತು ಅಮ್ಮನ ಬದುಕನ್ನು ಹಾಳುಮಾಡಿದ ಪಾಪಿ ನೀನು. ನಿನ್ನೆ ನಿನ್ನ ಮಗಳ ಜೊತೆಗೇ ಮಲಗಿದ್ದೀಯಾ. ಈ ಪಾಪಪ್ರಜ್ಞೆಯೊಟ್ಟಿಗೇ ಬದುಕಿಡೀ ನರಳು' ಎಂದು ಶಾಪಹಾಕಿ ಹೋದ ಮಗಳ ಮಾತು ಅವನನ್ನು ಹೇಗೆಲ್ಲ ಸುಡಬಹುದು? ಪ್ರತಿಷ್ಠೆ, ಜನಪ್ರಿಯತೆ, ಪ್ರಶಸ್ತಿ ಎಲ್ಲವೂ ಆ ಬೆಂಕಿಯ ಉರಿಯಲ್ಲಿ ಹೇಗೆ ಕಾಣಬಹುದು?

ಕೆ.ಕೆ. ಮೆನನ್ ಅವರ ಪ್ರಬುದ್ಧ ನಟನೆ ಈ ಎಲ್ಲ ಪ್ರಶ್ನೆಗಳಿಗೂ ಮತ್ತೆ ಮತ್ತೆ ಕಾಡುವ ರೀತಿಯಲ್ಲಿ ಉತ್ತರ ನೀಡುತ್ತಾ ಹೋಗುತ್ತದೆ. ಮಿಷ್ಟಿ ಚಕ್ರವರ್ತಿ ಮಾತಿನೊಟ್ಟಿಗೆ ಮೌನವೂ ಹಲವು ಅರ್ಥಗಳನ್ನು ಹೊಮ್ಮಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2nneIGI ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.